

بِسْمِ اللّٰهِ الرَّحْمَنِ الرَّحِيم

# ಡೆನ್ಮಾರ್ಕ್‌ನಲ್ಲಿ ಅಹ್ಮದಿಯಾ ಮಸ್‌ಜಿದ್ ಉದ್ಘಾಟನೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಡೆನ್‌ಮಾರ್ಕ್‌ನ **'ನುಸ್ರತ್ ಜಹಾನ್'** ಮಸೀದಿಯಲ್ಲಿ **06–05–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಂದಾಜು ಹನ್ನೊಂದು ವರ್ಷಗಳ ಹಿಂದೆ ನಾನು ಇಲ್ಲಿಗೆ (ಡೆನ್‌ಮಾರ್ಕ್‌ಗೆ) ಬಂದಿದ್ದೆನು. ಇಷ್ಟು ವರ್ಷಗಳು ದಾಟಿ ಹೋದುವು. ಆಗ ಚಿಕ್ಕ ಮಕ್ಕಳಾಗಿದ್ದ ಅನೇಕರು ಇಂದು ಯುವಕರಾಗಿದ್ದಾರೆ. ಅನೇಕರು ಮಕ್ಕಳ ತಂದೆ ತಾಯಂದಿರು ಆಗಿದ್ದಾರೆ. ಪ್ರತ್ಯಕ್ಷದಲ್ಲಿಯೂ ಇಲ್ಲಿನ ಜಮಾಅತ್‌ನ ಮೇಲೆ ಅಲ್ಲಾಹನು ತುಂಬಾ ಅನುಗ್ರಹ ದಯಪಾಲಿಸಿದ್ದಾನೆ. ಮಸ್‌ಜಿದ್‌ಗೆ ತಾಗಿಕೊಂಡು ಒಂದು ದೊಡ್ಡ ಹಾಲ್, ಕಚೇರಿ, ಲೈಬ್ರರಿ ಮತ್ತು ಇತರ ಸವಲತ್ತುಗಳು ಲಭಿಸಿದುವು. ಮಸ್‌ಜಿದ್ ಮುಂಬಾಗದಲ್ಲಿ ಖರೀದಿಸಿದ ಕಟ್ಟಡವನ್ನು ವಿಶಾಲಗೊಳಿಸಲಾಗಿದೆ. ಮಿಶನರಿಗೆ ವಾಸ ವ್ಯವಸ್ಥೆ, ಅತಿಥಿ ಮಂದಿರ ಮತ್ತು ಒಂದು ದೊಡ್ಡ ಹಾಲ್ ನಿರ್ಮಿಸಲಾಗಿದೆ. ಇವುಗಳೆಲ್ಲಾ ಅಲ್ಲಾಹನ ಅನುಗ್ರಹಗಳಾಗಿವೆ. ನಿಮ್ಮ ಮನೆಗಳ ಜನಸಂಖ್ಯೆ ವರ್ಧಿಸಿದೆ. ನಿಮ್ಮ ಸಂಪತ್ತು ವರ್ಧಿಸಿದೆ. ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಿಸಿ ಅಲ್ಲಾಹನು ಜಮಾಅತಿಗೆ ಬಹಳ ವಿಶಾಲತೆ ನೀಡಿದ್ದಾನೆ. ಖಂಡಿತವಾಗಿಯೂ ನಾವು ಈ ವಿಷಯಗಳಿಗೆ ಸಂಬಂಧಿಸಿ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕಾಗಿದೆ. ಕೃತಜ್ಞತೆ ಹೇಗೆ ಅರ್ಪಿಸಬೇಕು. ಅದು ಏನನ್ನು ಆವಶ್ಯಪಡುತ್ತದೆ ಎಂದು ಯೋಚಿಸಬೇಕು.

ನಾವು ನಮ್ಮ ಯೋಚನೆಗಳನ್ನು ಸತ್ಯವಿಶ್ವಾಸಿಗೆ ಅರ್ಹವಾದ ರೀತಿಯಲ್ಲಿ ಮಾಡಬೇಕು. ನಾವು **ಅಲ್‌ಹಮ್ದುಲಿಲ್ಲಾಹ್** ಎಂದು ಬಾಯಿಯಲ್ಲಿ ಹೇಳಿ ಸಂತೋಷಪಟ್ಟರೆ ಸಾಕಾಗಲಾರದು. ಅಲ್ಲಾಹನ ಆಜ್ಞೆಗಳನ್ನು ನಾವು ಪಾಲಿಸುತ್ತಿದ್ದೇವೆಯೋ ಎಂದು ನೋಡಬೇಕು. ಸತ್ಯವಿಶ್ವಾಸಿಗೆ ಯೋಗ್ಯವಾದ ರೀತಿಯಲ್ಲಿ ನಾವು ಜೀವಿಸುತ್ತಿದ್ದೇವೆಯೋ ಎಂದು ನೋಡಬೇಕು. ಅಲ್ಲಾಹನು ನಿಮಗೆ ಅಥವಾ ನಿಮ್ಮ ತಂದೆ ತಾತಂದರಿಗೆ ಅಹ್ಮದಿಯ್ಯತನ್ನು ಸ್ವೀಕರಿಸುವ ಭಾಗ್ಯ ನೀಡಿದನು. ಇದು ಅಲ್ಲಾಹನ ವಿಶಿಷ್ಟ ಅನುಗ್ರಹವಾಗಿದೆ. ಯಾವುದೋ ಸತ್ಕರ್ಮದ ಕಾರಣ ಅಲ್ಲಹನು ಈ ಅನುಗ್ರಹ ನೀಡಿರುವನು. ಆ ಸತ್ಕರ್ಮಗಳನ್ನು ಮುಂದುವರಿಸುವುದು ಮತ್ತು ನಿಮ್ಮ ಸ್ಥಿತಿಗಳನ್ನು ಮೊದಲಿಗಿಂತ ಉತ್ತಮಪಡಿಸುವುದು ಆವಶ್ಯಕವಾಗಿದೆ. ಹೀಗೆ ಮಾಡದಿದ್ದರೆ, ನಮ್ಮ ಹೆಜ್ಜೆಗಳು ನಿಂತುಬಿಟ್ಟರೆ, ನೆನಪಿಟ್ಟುಕೊಳ್ಳಬೇಕು, ನಾವು ನಮ್ಮ ಮಕ್ಕಳನ್ನು ಧರ್ಮದಿಂದ ದೂರ ಸರಿಸುವವರಾಗುವೆವು ಮತ್ತು ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಲಾಹು ಅಲೈಹಿ ವಸಲ್ಲಮರು ಭವಿಷ್ಯವಾಣಿ ಮೂಲಕ ಪ್ರಕಟಿಸಿದ ವಿಶಿಷ್ಟ ಅನುಗ್ರಹಗಳಿಂದ ಅವರನ್ನು ವಂಚಿತರನ್ನಾಗಿ ಮಾಡುವವರಾಗುವೆವು. ಎಂದರೆ ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನ ಮತ್ತು ಅವರನ್ನು ನಂಬುವುದೇ ಈ ಅನುಗ್ರಹವಾಗಿದೆ. ಯಾರ ತಂದೆ ತಾತಂದಿರು ಅಹ್ಮದಿಯರಾದರೋ ಅವರ ಮಕ್ಕಳು ಧರ್ಮದಿಂದ ದೂರ ಸರಿದರೆ ಅವರು ತಮ್ಮ ಹಿರಿಯರು ಮಾಡಿದ ಪ್ರಾರ್ಥನೆಗಳ ಅನುಗ್ರಹದಿಂದ ವಂಚಿತರಾಗುವರು. ಯಾವ ಹಿರಿಯರು ಅಹ್ಮದಿಯರಾದರೋ ಅವರು ತಮ್ಮ ಪ್ರತಿಜ್ಞೆಗಳನ್ನು ಈಡೇರಿಸಿದರು. ಮತ್ತು ಈ ಲೋಕ ಬಿಟ್ಟು ಹೋದರು. ತಮ್ಮ ಸಂತಾನ ಪರಂಪರೆಗೆ ಸೇರಿದವರು ಈ ಪ್ರತಿಜ್ಞೆ ಈಡೇರಿಸುವರೆಂಬ ಅಭಿಲಾಷೆ ಹೊಂದಿ ಪ್ರಾರ್ಥಿಸುತ್ತಾ ಅವರು ಇಹಲೋಕ ಬಿಟ್ಟು ಹೋದರು. ನಿಮ್ಮ ಪೈಕಿ ಅನೇಕರು ಹೇಗಿರುವರೆಂದರೆ, ನಾವು ಆ ಹಿರಿಯರು ಉಪದೇಶಿಸಿದ ಪ್ರತಿಜ್ಞೆಗಳನ್ನು ಈಡೇರಿಸುವವರಾಗಿದ್ದೇವೆಯೋ ಎಂದು ಯೋಚಿಸಬೇಕಾದ ಸ್ಥಿತಿ ಇದೆ. ಅದೇ ರೀತಿ ಸ್ವತಃ ಅಹ್ಮದಿಯ್ಯತ್ ಸ್ವೀಕರಿಸಿದವರು ಸಹ ತಮ್ಮನ್ನು ಪರಿಶೋಧಿಸುವ ಆವಶ್ಯಕತೆ ಇದೆ. ನಾವು ನಮ್ಮ ವಿಶ್ವಾಸದಲ್ಲಿ ವರ್ಧಿಸಿದ್ದೇವೆಯೋ ನಮ್ಮ ಕರ್ಮಗಳನ್ನು ಉತ್ತಮಪಡಿಸಲು ಪ್ರಯತ್ನಿಸಿದ್ದೇವೆಯೋ ಅಥವಾ ಪ್ರಯತ್ನ ಮಾಡುತ್ತಾ ಇದ್ದೇವೆಯೋ ಎಂದು. ಅಥವಾ ಕೇವಲ ಸಾಂದರ್ಭಿಕ ಉತ್ಸಾಹದಿಂದ ಅಹ್ಮದಿಯ್ಯತ್ ಸ್ವೀಕರಿಸಿದೆವೋ ಎಂದು. ನಮ್ಮ ಹೆಜ್ಜೆ ಅಭಿವೃದ್ಧಿಯ ಕಡೆಗೆ ಮುಂದೆ ಸಾಗುವಾಗ ಮಾತ್ರ ನಮಗೆ ಪ್ರಯೋಜನ ಸಿಗುವುದು.

ಒಟ್ಟಿನಲ್ಲಿ, ಅಹ್ಮದಿಯ್ಯತ್‌ಗೆ ಸೇರಿದ ಎಲ್ಲ ವಿಧಗಳ ಜನರು ಯೋಚಿಸಬೇಕು– ನಾವೆಲ್ಲರೂ ಇಸ್ಲಾಂ ಧರ್ಮದ ನೈಜ ತತ್ವಗಳನ್ನು ಅನುಸರಿಸಿ ಕಾರ್ಯ ಪ್ರವೃತ್ತರಾಗುವ ಆವಶ್ಯಕತೆ ಇದೆ ಎಂದು. ಆ ರೀತಿ ಮಾಡಿದರೆ ಮಾತ್ರ ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಗುಲಾಮನನ್ನು ಬೈಅತ್ ಮಾಡಿದ ಕರ್ತವ್ಯವನ್ನು ನಾವು ಈಡೇರಿಸಿದಂತಾಗುವುದು. ಪ್ರತಿಯೊಬ್ಬ ಅಹ್ಮದಿ ಪುರುಷ ಮತ್ತು ಮಹಿಳೆ ತನ್ನನ್ನು ಪರಿಶೋಧಿಸಬೇಕು. ನಾನು ನನ್ನನ್ನು ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳ ಪ್ರಕಾರ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೋ ನಾವು ನಮ್ಮ ಮಕ್ಕಳಿಗೆ ಅವರು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ಪ್ರಜ್ಞೆ ಹೊಂದುವ ರೀತಿಯಲ್ಲಿ ತರಬೇತಿ ನೀಡಲು ಪ್ರಯತ್ನ ಮಾಡುತ್ತಿದ್ದೇವೆಯೋ ಎಂದು ಪರಿಶೋಧಿಸಬೇಕು. ಏನು, ನಮ್ಮ ಸ್ವಂತ ಕೆಲಸಗಳು ಇಸ್ಲಾಮಿನ ತತ್ವಗಳಿಗೆ ಅನುಸಾರವಾಗಿದೆಯೋ ಅವು ನಮ್ಮ ಮಕ್ಕಳಿಗೆ ಮಾದರಿ ಆಗಿವೆಯೋ ನಮ್ಮ ನಮಾಝ್, ನಮ್ಮ ಆರಾಧನೆಗಳು, ನಮ್ಮ ಪ್ರತಿಯೊಂದು ಕೆಲಸ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಉಪದೇಶಗಳ ಪ್ರಕಾರವಾಗಿದೆಯೋ ಎಂದು ನಾವು ಅವಲೋಕಿಸಬೇಕು. ಈ ವಿಷಯಗಳ ಬಗ್ಗೆ ಗಾಢವಾಗಿ ಚಿಂತಿಸಲು ಮತ್ತು ನಮ್ಮ ಕರ್ಮಗಳ ಉನ್ನತ ಮಟ್ಟವನ್ನು ನಿಶ್ಚಯಿಸಲು ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮಾರ್ಗದರ್ಶನ ನೀಡಿದ್ದಾರೆ. ಈಗ ನಾನು ಅವುಗಳಲ್ಲಿ ಕೆಲವನ್ನು ನಿಮ್ಮ ಮುಂದೆ ಇರಿಸುತ್ತೇನೆ.

ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬಹಳ ನೋವಿನಿಂದ ಹೇಳಿದರು: ಈ ಗೊಂದಲಮಯ ಕಾಲಘಟ್ಟದಲ್ಲಿ ಪ್ರತಿಯೊಂದು ದಿಕ್ಕಿನಲ್ಲಿ ಪಥಭ್ರಷ್ಟತೆ ಮತ್ತು ನಿರ್ಲಕ್ಷ್ಯತೆಯ ಗಾಳಿ ಬೀಸುತ್ತಿರುವಾಗ ತಖ್ವವನ್ನು ಹೊಂದುವುದು ನಮ್ಮ ಜಮಾಅತಿಗೆ ಆವಶ್ಯಕವಾಗಿದೆ. ಲೋಕದ ಸ್ಥಿತಿ ಹೇಗಿದೆ ಎಂದರೆ ಅಲ್ಲಾಹನ ಆಜ್ಞೆಗಳ ಬಗ್ಗೆ ಗೌರವವಿರುವುದಿಲ್ಲ. ಹಕ್ಕುಗಳ ಬಗ್ಗೆ ಮತ್ತು ವಸಿಯ್ಯತ್‌ಗಳ ಬಗ್ಗೆ ನಿರ್ಲಕ್ಷ್ಯತೆ ಇದೆ. ಜನರು ತಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವುದಿಲ್ಲ. ವಸಿಯ್ಯತ್‌ಗಳನ್ನೂ ಈಡೇರಿಸುವುದಿಲ್ಲ. ಅವರು

ಲೌಕಿಕ ಕೆಲಸಗಳಲ್ಲಿ ಬಹಳ ಹೆಚ್ಚು ಮಗ್ನರಾಗಿದ್ದಾರೆ. ಅಲ್ಪ ಮಾತ್ರ ಲೌಕಿಕ ನಷ್ಟ ಸಂಭವಿಸುವುದನ್ನು ನೋಡಿಕೊಂಡು ಧರ್ಮದ ಭಾಗವನ್ನು ಬಿಟ್ಟುಬಿಡುತ್ತಾರೆ. ಲೌಕಿಕ ನಷ್ಟದಿಂದ ಪಾರಾಗಲಿಕ್ಕಾಗಿ ಅವರು ನಿಸ್ಸಂಶಯವಾಗಿ ಧರ್ಮವನ್ನು ದೂರ ಸರಿಸಿ ಅಲ್ಲಾಹನ ಹಕ್ಕುಗಳನ್ನು ನಾಶಪಡಿಸುತ್ತಾರೆ. ಒಬ್ಬರಿನ್ನೊಬ್ಬರೊಂದಿಗೆ ದುರಾಶೆಯ ಸಂಕಲ್ಪದಿಂದ ವರ್ತಿಸುತ್ತಾರೆ. ಶಾರೀರಿಕ ಭಾವೋದ್ವೇಗಗಳನ್ನು ನಿಯಂತ್ರಿಸುವಲ್ಲಿ ಬಹಳ ಬಲಹೀನರಾಗುತ್ತಾರೆ. ಅವರನ್ನು ಅಲ್ಲಾಹನು ಬಲಹೀನರಾಗಿರಿಸಿದಾಗ ಅವರು ಪಾಪ ಕೃತ್ಯ ಮಾಡಲು ಧೈರ್ಯ ಹೊಂದುವುದಿಲ್ಲ. ಈ ಜನರು ಪಾಪಕೃತ್ಯ ಮಾಡದೆ ಇರುವುದು ಅವರಲ್ಲಿ ಒಳ್ಳೆಯ ಗುಣ ಇರುವ ಕಾರಣದಿಂದಲ್ಲ. ಬದಲಾಗಿ ಅವರಿಗೆ ಪಾಪ ಕೃತ್ಯ ಮಾಡಲು ಧೈರ್ಯವಿಲ್ಲದ ಕಾರಣ ಅವರು ಅದರಿಂದ ದೂರವಿದ್ದಾರೆ. ಅವರಿಗೆ ಕೆಲವು ಭಯಗಳಿರುತ್ತವೆ. ಆ ಭಯ ದೂರ ಸರಿದಾಗ ಅವರು ಪಾಪಕೃತ್ಯ ಮಾಡಲು ತೊಡಗುತ್ತಾರೆ. ಈ ಕಾಲದಲ್ಲಿ ನೀವು ಎಲ್ಲಿ ಬೇಕಾದರೂ ಹುಡುಕಿರಿ, ನಿಮಗೆ ತಿಳಿಯುವುದು, ಸತ್ಯವಾದ ತಖ್ವ (ಭಯಭಕ್ತಿ) ಎದ್ದು ಹೋಗಿದೆ ಮತ್ತು ಸತ್ಯವಾದ ವಿಶ್ವಾಸ ಇಲ್ಲವೇ ಇಲ್ಲವೆಂದು. ಪವಿತ್ರ ಖುರ್‌ಆನ್ ಹಿಂದೆ ಅವತೀರ್ಣವಾದ ರೀತಿಯಲ್ಲಿಯೇ ಸಂರಕ್ಷಿಸಲ್ಪಟ್ಟಿದೆ. ಅಲ್ಲಾಹನೇ ಹೇಳಿದ್ದಾನೆ: **ಇನ್ನಾ ನಹ್‌ನು ನಝ್ಝಲ್‌ನ ದ್ದಿಕ್ರ ವ ಇನ್ನಾ ಲಹೂ ಲಹಾಫಿಝೂನ್.** (ನಾವೇ ಪವಿತ್ರ ಖುರ್‌ಆನನ್ನು ಅವತೀರ್ಣಗೊಳಿಸಿದ್ದೇವೆ. ನಾವೇ ಅದನ್ನು ಸಂರಕ್ಷಿಸುವೆವು) ಎಂದು. ಹದೀಸಿನ ಬಹಳ ದೊಡ್ಡ ಭಾಗವೂ ಅಸ್ತಿತ್ವದಲ್ಲಿದೆ. ಅವುಗಳಲ್ಲಿ ಅನುಗ್ರಹವಿದೆ. ಆದರೆ ಜನರ ಹೃದಯಗಳಲ್ಲಿ ಸತ್ಯವಿಶ್ವಾಸ ಮತ್ತು ಅನುಷ್ಠಾನದ ಆಸಕ್ತಿ ಸಂಪೂರ್ಣ ಇಲ್ಲವಾಗಿದೆ. ಆದುದರಿಂದ ಅಲ್ಲಾಹನು ಜೀವಂತವಾಗಿರುವ ಜನರ ಒಂದು ಹೊಸ ಸಮುದಾಯವನ್ನು ಸೃಷ್ಟಿಸಲು ಇಚ್ಛಿಸುತ್ತಾನೆ. ಇದಕ್ಕೋಸ್ಕರವೇ ನಮ್ಮ ಧರ್ಮ ಪ್ರಚಾರ ಕಾರ್ಯವಿದೆ– ತಖ್ವಭರಿತ ಜೀವಿತವನ್ನು ಗಳಿಸುವ ಬಗ್ಗೆ.

ಅನ್ಯರ ವಿಷಯ ಬಿಟ್ಟು ಬಿಡಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದವರೆಂದು ವಾದಿಸುವ ನಮ್ಮ ಪೈಕಿ ಎಷ್ಟು ಜನರು ಅಲ್ಲಾಹನ ಆಜ್ಞೆಗಳನ್ನು ತಮ್ಮ ಮೇಲೆ ಜಾರಿಗೊಳಿಸುತ್ತಿದ್ದಾರೆ. ಅಲ್ಲಾಹನು ಹೇಳುತ್ತಾನೆ: ನಾನು ಜಿನ್ನ್ ಮತ್ತು ಇನ್ಸ್ ವರ್ಗದವರನ್ನು ನನ್ನ ಆರಾಧನೆಗೋಸ್ಕರ ಸೃಷ್ಟಿಸಿರುವೆನೆಂದು. ಏನು, ನಾವು ನಮ್ಮ ಲೌಕಿಕ ಕೆಲಸಗಳನ್ನು ಆರಾಧನೆಗೋಸ್ಕರ ಬಲಿಯರ್ಪಿಸುತ್ತೇವೆಯೇ? ಅಥವಾ ತದ್ವಿರುದ್ಧವಾಗಿ ವರ್ತಿಸುತ್ತಿದ್ದೇವೆಯೇ? ಅಥವಾ ನಾವು ನಮ್ಮ ಧಾರ್ಮಿಕ ಕಾರ್ಯಗಳನ್ನು ಲೌಕಿಕ ಕಾರ್ಯಗಳಿಗೋಸ್ಕರ ಬಲಿಯರ್ಪಿಸುತ್ತಿದ್ದೇವೆಯೇ? ಎಂದು ನೋಡಬೇಕಾಗಿದೆ. ಕೆಲವರು ಸಮಯಕ್ಕೆ ಸರಿಯಾಗಿ ನಮಾಝ್ ಮಾಡುವವರಾಗಿದ್ದರೂ ಅವರು ಅದನ್ನು ಗಂಟಲಿನಿಂದ ನುಂಗಿಬಿಡುವ ಹಾಗೆ ಅನುಷ್ಠಿಸುತ್ತಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬದವರ ಸ್ಥಿತಿ ಬೇರೆಯೇ ಆಗಿದೆ. ನಮ್ಮವರಲ್ಲಿಯೂ ಜನರೊಂದಿಗೆ ಅವರ ರೀತಿಯಲ್ಲಿ ವರ್ತಿಸುವ ಜನರಿದ್ದಾರೆ. ಜನರೊಂದಿಗೆ ಔದಾರ್ಯಪೂರ್ಣವಾಗಿ ವರ್ತಿಸಿರಿ ಎಂದು ಅಲ್ಲಾಹನು ಹೇಳಿರುವನು. ಆದರೆ, ಅನೇಕರು ಹೇಗಿದ್ದಾರೆಂದರೆ ಔದಾರ್ಯಪೂರ್ಣವಾಗಿ ವರ್ತಿಸುವುದಂತೂ ಇರಲಿ, ಅವರು ಜನರ ಹಕ್ಕುಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸುತ್ತಾರೆ. ಬೇರೆ ಕೆಲವರು ಹೇಗಿದ್ದಾರೆಂದರೆ ಅವರು ಲೌಕಿಕ ನಷ್ಟವನ್ನು ಸಹಿಸುವುದಿಲ್ಲ. ಆದರೆ ಧರ್ಮಕ್ಕೆ ನಷ್ಟ ಸಂಭವಿಸುವುದಾದರೆ ಅವರು ಅದನ್ನು ಸಹಿಸುತ್ತಾರೆ. ನಮ್ಮಲ್ಲಿ ಅನೇಕರು ತಮ್ಮ ಭಾವೋದ್ವೇಗಗಳನ್ನು ನಿಯಂತ್ರಿಸುವುದಿಲ್ಲ. ಚಿಕ್ಕಪುಟ್ಟ ವಿಷಯಗಳ ಕಾರಣ ರೊಚ್ಚಿಗೇಳುತ್ತಾರೆ. ಅನ್ಯರು ಹೀಗೆ ಮಾಡುವುದಾದರೆ, ಅವರು ಅಜ್ಞಾನಿಗಳೆಂದು ನಾವು ಹೇಳಬಹುದು. ಆದರೆ ನಮ್ಮ ಪೈಕಿ ಯಾರಾದರೂ ಹೀಗೆ ಮಾಡಿದರೆ ಅದು ಖೇದಕರವಾಗಿದೆ. ಆದುದರಿಂದ ಪ್ರತಿಯೊಬ್ಬ ಈ ವಿಷಯಗಳಿಗೆ ಸಂಬಂಧಿಸಿ ತನ್ನನ್ನು ಪರಿಶೋಧಿಸಬೇಕು. ನಾವು ಯಾವಾಗಲೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ 'ಅಲ್ಲಾಹನು ಜೀವಂತ ಜನರ ಹೊಸ ಒಂದು ಸಮುದಾಯವನ್ನು ಸೃಷ್ಟಿಸಲು ಇಚ್ಛಿಸುತ್ತಾನೆ' ಎಂಬ ಮಾತನ್ನು ನೆನಪಿನಲ್ಲಿಟ್ಟು ಕೊಳ್ಳಬೇಕು. ನಾವು ಬೈಅತ್ ಮಾಡಿದುದು ಆ ಜೀವಂತ ಜನರೊಂದಿಗೆ ಸೇರಲಿಕ್ಕೋಸ್ಕರವಾಗಿದೆ. ನಾವು ಯಾವಾಗಲೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳ ಬಗ್ಗೆ ಗಮನಹರಿಸಬೇಕು ಮತ್ತು ಜೀವಂತ ಸಮುದಾಯದಲ್ಲಿ ಸೇರುವವರಾಗಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಯಾರು ಅಲ್ಲಾಹನಿಗೆ ಭಯಪಟ್ಟು ಅವನ ಮಾರ್ಗವನ್ನು ಅನ್ವೇಷಿಸುತ್ತಾನೋ ಮತ್ತು ಅದಕ್ಕೋಸ್ಕರ ಪ್ರಾರ್ಥಿಸುತ್ತಾನೋ ಅವನಿಗೆ ಅಲ್ಲಾಹನು ತನ್ನ ನಿಯಮಗಳ ಪ್ರಕಾರ (ಎಂದರೆ ಯಾರು ನಮ್ಮ ಬಗ್ಗೆ ಪ್ರಯತ್ನ ಮಾಡುತ್ತಾರೋ ಅವರಿಗೆ ನಮ್ಮ ಮಾರ್ಗ ತೋರಿಸಿ ಕೊಡುವೆವು ಎಂಬ ವಾಗ್ದಾನ ಪ್ರಕಾರ) ಸ್ವತಃ ಅವನ ಕೈಹಿಡಿದು ಮಾರ್ಗ ತೋರಿಸುತ್ತಾನೆ. ಎಲ್ಲಿಯ ತನಕ ಮನುಷ್ಯನು ಶುದ್ಧ ಹೃದಯನಾಗಿ ಸತ್ಯ ಮತ್ತು ನಿಷ್ಠೆಯಿಂದ ಎಲ್ಲಾ ತಪ್ಪು ಮಾರ್ಗಗಳ ಮತ್ತು ತಪ್ಪು ಅಭಿಲಾಷೆಗಳ ಬಾಗಿಲುಗಳನ್ನು ತನ್ನೆದುರಿಗೆ ಮುಚ್ಚಿಬಿಟ್ಟು ಅಲ್ಲಾಹನ ಮುಂದೆ ನಿಂತು ತನ್ನ ಕೈ ಎತ್ತಿ ಬೇಡಿಕೊಳ್ಳುವುದಿಲ್ಲವೋ ಅಲ್ಲಿಯ ತನಕ ಅವನು ಅಲ್ಲಾಹನ ಸಹಾಯ ಪಡೆಯಲು ಅರ್ಹತೆ ಹೊಂದುವುದಿಲ್ಲ. ಮನುಷ್ಯನು ಅಲ್ಲಾಹನ ಬಾಗಿಲಲ್ಲಿಯೇ ಬಿದ್ದುಕೊಂಡು ಅವನನ್ನೇ ಬೇಡಿಕೊಳ್ಳುವಾಗ ಅವನು ಅಲ್ಲಾಹನ ಸಹಾಯವನ್ನೂ ಅನುಗ್ರಹವನ್ನೂ ಆಕರ್ಷಿಸುವವನಾಗುತ್ತಾನೆ. ಅಲ್ಲಾಹನಿಗೆ ಏನೂ ತಿಳಿಯುವುದಿಲ್ಲವೆಂದು ಭಾವಿಸಬೇಡಿರಿ. ಅಲ್ಲಾಹನು ಆಕಾಶದಲ್ಲಿ ಕುಳಿತಿದ್ದರೂ ಮನುಷ್ಯನ ಹೃದಯದ ಮೂಲೆ ಮೂಲೆಗಳ ಬಗ್ಗೆ ಅರಿತಿರುವವನಾಗಿದ್ದಾನೆ. ಹೃದಯದ ಯಾವುದಾದರೂ ಮೂಲೆಯಲ್ಲಿ ಯಾವುದಾದರೂ ಅಂಧಕಾರ, ಶಿರ್ಕ್ ಅಥವಾ ಬಿದ್‌ಅತ್ (ನವೀನ ಆಚರಣೆಯ) ಯಾವುದಾದರೂ ಅಂಶವಿದ್ದರೆ ಅಂತಹ ಮನುಷ್ಯನ ಪ್ರಾರ್ಥನೆಗಳನ್ನೂ ಆರಾಧನೆಗಳನ್ನೂ ಅವನ ಮುಖಕ್ಕೇ ಅಲ್ಲಾಹನು ಎಸೆದು ಬಿಡುವನು. ಒಬ್ಬ ಮನುಷ್ಯನ ಹೃದಯ ಎಲ್ಲ ವಿಧಗಳ ಶಾರೀರಿಕ ಅಭಿಲಾಷೆ ಮತ್ತು ಅಂಧಕಾರದಿಂದ ಮುಕ್ತವಾಗಿ ಶುದ್ಧವಾಗಿದ್ದರೆ ಅವನಿಗೋಸ್ಕರ ಅನುಗ್ರಹದ ಬಾಗಿಲುಗಳನ್ನು ಅಲ್ಲಾಹನು ತೆರೆಯುತ್ತಾನೆ, ಅವನನ್ನು ತನ್ನ ನೆರಳಿನಲ್ಲಿ ಇರಿಸುತ್ತಾನೆ ಮತ್ತು ಅವನ ಪಾಲನೆ ಪೋಷಣೆಯ ಜವಾಬ್ದಾರಿಯನ್ನು ತಾನೇ ವಹಿಸಿಕೊಳ್ಳುತ್ತಾನೆ.

ಒಬ್ಬ ಯಥಾರ್ಥ ಅಹ್ಮದಿ ತನ್ನ ಹೃದಯವನ್ನು ಪ್ರತಿಯೊಂದು ರೀತಿಯ ಶಿರ್ಕ್ ಮತ್ತು ಬಿದ್‌ಅತ್ ಗಳಿಂದ ಮುಕ್ತವನ್ನಾಗಿ ಮಾಡಿ ಶುದ್ಧೀಕರಿಸಬೇಕು. ನಾವು ಬಹಳ ಪ್ರಾರ್ಥಿಸಿದೆವು, ಬಹಳ ದೀರ್ಘ ಪ್ರಾರ್ಥನೆ ಮಾಡಿದೆವು ಆದರೆ ಅವು ಸ್ವೀಕರಿಸಲ್ಪಟ್ಟಿಲ್ಲ ಎಂದು ಹೇಳುವವರು ತಮ್ಮ ಹೃದಯಗಳನ್ನು ಪರಿಶೋಧಿಸಬೇಕು. ನಮ್ಮಲ್ಲಿ

ಯಾವುದಾದರೂ ರಹಸ್ಯವಾದ ಶಿರ್ಕ್ ಇದೆಯೋ ಯಾವುದಾದರೂ ಬಿದ್‌ಅತ್ ಇದೆಯೋ ಅಲ್ಲಾಹನು ನಿಷಿದ್ಧಗೊಳಿಸಿದ ಕೆಲಸಗಳನ್ನು ನಾವು ಮಾಡುತ್ತಿದ್ದೇವೆಯೋ ಎಂದು ನೋಡಬೇಕು.

ತಖ್ವವನ್ನು ಸ್ಥಾಪಿಸುವುದೇ ಈ ಜಮಾಅತಿನ ಸ್ಥಾಪನೆಯ ಉದ್ದೇಶ ಎನ್ನುವುದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದೆಡೆ ಹೀಗೆ ಹೇಳುತ್ತಾರೆ: ಈ ಜಮಾಅತನ್ನು ಸ್ಥಾಪಿಸುವುದರಿಂದ ಅಲ್ಲಾಹನು ಇಚ್ಛಿಸುವುದೇನೆಂದರೆ, ಲೋಕದಲ್ಲಿ ತಖ್ವ (ಭಯಭಕ್ತಿ) ಕಡಿಮೆಯಾಗಿದೆ ಎಂದು ಅಲ್ಲಾಹನು ನನಗೆ ಹೇಳಿದ್ದಾನೆ. ಈ ಜಮಾಅತನ್ನು ಸ್ಥಾಪಿಸುವ ಉದ್ದೇಶ ತಖ್ವವನ್ನು ಸ್ಥಾಪಿಸುವುದಾಗಿದೆ.

ಲೋಕಕ್ಕೆ ತಖ್ವ ಮತ್ತು ಪರಿಶುದ್ಧತೆಯ ಜೀವಂತ ಉದಾಹರಣೆ ತೋರಿಸಿಕೊಡಲು ಅಲ್ಲಾಹನು ಈಗ ಇಚ್ಛಿಸಿದ್ದಾನೆ. ಇದೇ ಉದ್ದೇಶಕ್ಕೋಸ್ಕರ ಅಲ್ಲಾಹನು ಈ ಜಮಾಅತನ್ನು ಸ್ಥಾಪಿಸಿರುವನು. ನಾವು ನಮ್ಮನ್ನು ಪರಿಶೋಧಿಸಬೇಕು. ನಾವು ತಖ್ವ ಮತ್ತು ಪರಿಶುದ್ಧತೆಯ ಉದಾಹರಣೆಗಳಾಗಿದ್ದೇವೆಯೋ ಎಂದು ನೋಡಬೇಕು. ನಮ್ಮಿಂದ ಅನ್ಯರು ನೀತಿಪಾಠ ಗಳಿಸುವರೋ ಎಂದು ನೋಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಜಮಾಅತನ್ನು ಹೇಗೆ ಕಾಣಲು ಇಚ್ಛಿಸುತ್ತಾರೆ ಎನ್ನುವುದರ ಬಗ್ಗೆ ಹೀಗೆ ಹೇಳುತ್ತಾರೆ: ಈ ಜಮಾಅತನ್ನು ಅಲ್ಲಾಹನು ಸ್ವತಃ ತನ್ನ ಕೈಯಿಂದ ಸ್ಥಾಪಿಸಿರುವನು. ಹೀಗಿದ್ದರೂ ನಾವು ಕಾಣುತ್ತಿದ್ದೇವೆ, ಕೆಲವು ಜನರು ಯಾವುದಾದರೂ ಉದ್ದೇಶದಿಂದ ಜಮಾಅತಿಗೆ ಸೇರುತ್ತಾರೆ. ತಖ್ವವನ್ನು ಮತ್ತು ಒಳಿತನ್ನು ಗಳಿಸುವುದು ಅವರ ಉದ್ದೇಶವಾಗಿರುವುದಿಲ್ಲ. ಅವರಿಗೆ ತಮ್ಮದೇ ಆದ ಕೆಲವು ಸ್ವಾರ್ಥ ಉದ್ದೇಶಗಳಿರುತ್ತವೆ. ಆ ಉದ್ದೇಶ ಈಡೇರಿಸಲು ಅವರು ಜಮಾಅತಿಗೆ ಸೇರುತ್ತಾರೆ. ಅವರ ಉದ್ದೇಶ ಸಫಲವಾಗದಿದ್ದರೆ ಅವರು ಜಮಾಅತ್ ಬಿಟ್ಟು ಹೋಗುತ್ತಾರೆ. ಆಗ ಅವರಿಗೆ ವಿಶ್ವಾಸವೇನೂ ಇರುವುದಿಲ್ಲ. ಆದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರ ಕಡೆಗೆ ನೋಡುವುದಾದರೆ ಅವರಲ್ಲಿ ಇಂತಹ ಸಂಭವ ಒಂದು ಸಹ ಇರುವುದಿಲ್ಲ. ಅವರಲ್ಲಿ ಯಾರೂ ಹೀಗೆ ಮಾಡಲಿಲ್ಲ. ನಮ್ಮ ಬೈಅತ್ ತೌಬದ ಬೈಅತ್ ಆಗಿದೆ. ಆದರೆ ಸಹಾಬರ ಬೈಅತ್ ತಲೆ ಕಡಿಸಿಕೊಳ್ಳುವ ಬೈಅತ್ ಆಗಿತ್ತು. ಅವರಿಗೆ ತಮ್ಮ ವೈಯ್ಯಕ್ತಿಕ ಗೌರವದ ಬಗ್ಗೆ ಪರಿವೆ ಇರಲಿಲ್ಲ. ಅವರಿಗೆ ದೊಡ್ಡ ಹುದ್ದೆಗಳ ಆಶೆ ಇರಲಿಲ್ಲ. ಅವರಿಗಿದ್ದ ಉದ್ದೇಶ ಇಷ್ಟುಮಾತ್ರ. ನಾವು ಇಸ್ಲಾಮಿಗೋಸ್ಕರ ಜೀವ, ಸಂಪತ್ತು, ಸಮಯ ಮತ್ತು ಗೌರವ ಬಲಿಯರ್ಪಿಸಲು ಸದಾ ಸಿದ್ಧರಿದ್ದೇವೆ ಎಂಬುದು. ಹುದ್ದೆದಾರರು ಇದರ ಬಗ್ಗೆ ಗಮನಿಸಬೇಕಾದ ಅಗತ್ಯವಿದೆ.

ನಮ್ಮ ಸ್ವಭಾವ ಗುಣಗಳನ್ನು ಉತ್ತಮ ಪಡಿಸಲು ಒಳಿತನ್ನು ನೆಲೆನಿಲ್ಲಿಸುವ ಬಗ್ಗೆ ಮತ್ತು ಕೆಡುಕನ್ನು ತ್ಯಜಿಸುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಒಬ್ಬನು ತನ್ನ ಸ್ವಭಾವಗುಣಗಳಲ್ಲಿ ಉಂಟಾದ ಬದಲಾವಣೆಯನ್ನು ತನ್ನ ನೆರೆ ಹೊರೆಯವನಿಗೆ ತೋರಿಸಿ ಕೊಟ್ಟು ನಾನು ಹಿಂದೆ ಹೇಗಿದ್ದೆ ಈಗ ಹೇಗೆ ಆಗಿದ್ದೇನೆ ಎಂದು ತೋರಿಸಿ ಕೊಡುವುದಾದರೆ ಅವನೊಂದು ಪವಾಡ ತೋರಿಸುತ್ತಾನೆ. ಒಬ್ಬನು ಒಂದು ಜಮಾಅತಿಗೆ ಸೇರಿದ ನಂತರ ಆ ಜಮಾಅತಿನ ಘನತೆ ಮತ್ತು ಗೌರವವನ್ನು ಕಾಪಾಡುವುದಿಲ್ಲವಾದರೆ ಮತ್ತು ಅದರ ತತ್ವಗಳ ವಿರುದ್ಧ ವರ್ತಿಸುವುದಾದರೆ ಅವನು ಅಲ್ಲಾಹನಿಂದ ಹಿಡಿಗೊಡಲ್ಪಡುತ್ತಾನೆ. ಏಕೆಂದರೆ ಅವನು ಸ್ವತಃ ತನ್ನನ್ನು ನಾಶ ಮಾಡುತ್ತಾನಲ್ಲದೆ ಅನ್ಯರಿಗೆ ಕೆಟ್ಟ ಉದಾಹರಣೆ ಆಗುತ್ತಾ ಅವರನ್ನು ಸನ್ಮಾರ್ಗದಿಂದ ವಂಚಿತರನ್ನಾಗಿ ಮಾಡುತ್ತಾನೆ. ನಿಮ್ಮ ಶಕ್ತಿಯಾನುಸಾರವಾಗಿ ಅಲ್ಲಾಹನಿಂದ ಸಹಾಯ ಬೇಡಿಕೊಳ್ಳಿರಿ. ನಿಮ್ಮ ಪೂರ್ಣ ಶಕ್ತಿ ಬಳಸಿ ನಿಮ್ಮ ಬಲಹೀನತೆಗಳನ್ನು ದೂರ ಸರಿಸಲು ಪ್ರಯತ್ನಿಸಿರಿ. ನೀವು ಬಲಗುಂದಿದವರಾಗುವಾಗ ಸತ್ಯ ಮತ್ತು ದೃಢ ವಿಶ್ವಾಸದೊಂದಿಗೆ ಕೈ ಎತ್ತಿ ಬೇಡಿಕೊಳ್ಳಿರಿ. ಆರ್ದ್ರ ಹೃದಯದಿಂದ, ಸತ್ಯ ಮತ್ತು ದೃಢವಿಶ್ವಾಸದಿಂದ ಬೇಡಿಕೊಂಡು ಎತ್ತಿದ ಕೈ ಖಾಲಿಯಾಗಿ ಮರಳಿ ಬರಲಾರದು. ಒಬ್ಬನು ತನ್ನ ಸಹಜೀವಿಗಳ ಬಗ್ಗೆ ಸಹಾನುಭೂತಿ ಹೊಂದುವುದಿಲ್ಲವಾದರೆ ಅವನು ಜಿಪುಣನಾಗಿದ್ದಾನೆ. ಒಳಿತು ಮತ್ತು ಅನುಗ್ರಹ ದೊರಕುವ ಒಂದು ಮಾರ್ಗವನ್ನು ನಾನು ಕಂಡರೆ ಅದರ ಕಡೆಗೆ ಜನರನ್ನು ಕರೆಯುವುದು ನನ್ನ ಕಡ್ಡಾಯ ಕರ್ತವ್ಯವಾಗಿದೆ.

ನಾವು ನಮ್ಮ ಜೀವಿತದಲ್ಲಿ ಉತ್ತಮ ಮಾದರಿ ತೋರಿಸಿಕೊಂಡು ತಬ್ಲೀಗ್ ಮಾಡುವ ನಮ್ಮ ಕರ್ತವ್ಯವನ್ನು ಸಹ ಈಡೇರಿಸಬೇಕು. ಇದು ಪ್ರತಿಯೊಬ್ಬ ಅಹ್ಮದಿಯ ಹೊಣೆಗಾರಿಕೆಯಾಗಿದೆ. ಇದರ ಬಗ್ಗೆ ಗಮನ ಹರಿಸಬೇಕಾಗಿದೆ. ಕೊನೆಗೆ ಯಾವುದಾದರೊಂದು ಕಾಲದಲ್ಲಿ ಜನರು ಆಲಿಸುವರು. ಯಾರೂ ಆಲಿಸದಿದ್ದರೂ ನಾವು ಈ ಸಂದೇಶ ತಲಪಿಸುತ್ತಾ ಇರಬೇಕು ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ. ಅದರೊಂದಿಗೆ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ಸೇರಿದವರೆಂದು ವಾದಿಸುವಾಗ ನಾವು ಉತ್ತಮ ಮಾದರಿಯನ್ನು ತೋರಿಸಬೇಕು. ಆಗ ಜನರ ಶ್ರದ್ಧೆ ನಮ್ಮ ಕಡೆಗೆ ತಿರುಗುವುದು.

ನಮ್ಮ ಸ್ಥಿತಿಯನ್ನು ಉತ್ತಮ ಪಡಿಸುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನನಗೆ ಅವತೀರ್ಣವಾದ ಇಲ್‌ಹಾಮ್‌ನಲ್ಲಿ **ಇಲ್ಲಲ್ಲಝೀನ ಅಲವ್ ಬಿ ಇಸ್‌ತಿಕ್‌ಬಾರ್** ಎಂದು ಹೇಳಲಾಗಿದೆ. ಇದು ಪ್ಲೇಗ್‌ಗೆ ಸಂಬಂಧಿಸಿದ ಅರಬಿ ಇಲ್‌ಹಾಮ್ ಆಗಿದೆ. ನಿನ್ನ ಮನೆಯೊಳಗೆ ಬಂದವರನ್ನು ನಾನು ರಕ್ಷಿಸುವೆನು– ಅಹಂಭಾವದಿಂದ ವರ್ತಿಸುವವರನ್ನು ಹೊರತುಪಡಿಸಿ ಎಂದು ಸೂಚಿಸಲಾಗಿದೆ. ಅಹಂಭಾವದಿಂದ ತಮ್ಮನ್ನು ಉನ್ನತ ಸ್ಥಾನದವರು ಎಂದು ಭಾವಿಸುವವರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅವರು ಪೂರ್ಣವಾಗಿ ಅನುಸರಣೆ ಮಾಡದವರಾಗಿದ್ದಾರೆ. ಅಂತಹ ಜನರಿಗೆ ಈ ವಾಗ್ದಾನ ಅನ್ವಯಿಸಲಾರದು. ಆದುದರಿಂದ ನೀವು ಕಿಶ್ತಿನೂಹ್ ಎಂಬ ಗ್ರಂಥವನ್ನು ಪದೇ ಪದೇ ಓದಬೇಕು. ಪವಿತ್ರ ಖುರ್‌ಆನ್ ಸಹ ಓದಬೇಕು ಮತ್ತು ಅದರ ಆಜ್ಞೆಗಳನ್ನು ಪಾಲಿಸಬೇಕು. ಅಹ್ಮದಿಯರಾಗಿ ನೀವು ಮುಸ್ಲಿಮ್ ಸಮುದಾಯದ ಶಾಪವನ್ನೂ ಬೈಗಳನ್ನೂ ಗಳಿಸಿದಿರಿ. ಇಂತಹ ನೀವು ಅಲ್ಲಾಹನೊಂದಿಗೆ ಸಹ ನಿಮ್ಮ ವ್ಯವಹಾರವನ್ನು ಸರಿಪಡಿಸದಿದ್ದರೆ ಅವನ ಅನುಗ್ರಹ ಪಡೆಯದಿದ್ದರೆ ಎಷ್ಟು ಕಷ್ಟಕರವಾಗುವುದು.

ಆದುದರಿಂದ ನೀವೆಲ್ಲರೂ ನಿಮ್ಮನ್ನು ಅವಲೋಕಿಸುವುದು ಆವಶ್ಯಕವಾಗಿದೆ. ನವ ಅಹ್ಮದಿಯರು ಮತ್ತು ಹಳೆಯ ಅಹ್ಮದಿಯರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ನಂತರ ತಮ್ಮ ಅನುಷ್ಠಾನ ಕರ್ಮಗಳನ್ನು ಸುಧಾರಣೆ ಮಾಡದಿದ್ದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದುದರಿಂದ ದೊರಕುವ ಅನುಗ್ರಹಗಳನ್ನು ಗಳಿಸಲಾರರು. ನಾವು ಅಲ್ಲಾಹನ ಸಂರಕ್ಷಣೆಯ ನೆರಳನ್ನು ಸಹ ಪಡೆಯಲಾರೆವು. ಪ್ರತಿಯೊಬ್ಬ ಅಹ್ಮದಿ ಪ್ರತಿಜ್ಞೆ ಮಾಡಿರುವುದು 'ನಾನು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವೆನು' ಎಂದಾಗಿದೆ. ಖುದ್ದಾಮುಲ್ ಅಹ್ಮದಿಯಾ ಈ ಪ್ರತಿಜ್ಞೆ ಮಾಡುತ್ತಾರೆ. ಅನ್‌ಸಾರುಲ್ಲಾ

ಸಹ ಈ ಪ್ರತಿಜ್ಞೆ ಮಾಡುತ್ತಾರೆ. ಲಜ್‌ನ ಸಹ ಈ ಪ್ರತಿಜ್ಞೆ ಮಾಡುತ್ತಾರೆ. ಜಮಾಅತಿನ ಎಲ್ಲರೂ ಬೈಅತ್ ಸಂದರ್ಭದಲ್ಲಿ ಈ ಪ್ರತಿಜ್ಞೆ ಮಾಡುತ್ತಾರೆ. ಈ ಪ್ರತಿಜ್ಞೆಯನ್ನು ನೀವು ಸಂರಕ್ಷಿಸುವುದಾದರೆ, ನಿಮಗೆ ವಹಿಸಿಕೊಡಲಾದ ಅಮಾನತ್‌ಗಳನ್ನು ಸಂರಕ್ಷಿಸುವುದಾದರೆ, ಎಂದರೆ ಹುದ್ದೇದಾರರು ಅವರಿಗೆ ನೀಡಲಾದ ಹುದ್ದೆ ಎಂಬ ಅಮಾನತ್ ಸಂರಕ್ಷಿಸುವುದಾದರೆ ಮತ್ತು ಪ್ರತಿಯೊಬ್ಬ ಅಹ್ಮದಿ ಅವನಿಗೆ ವಹಿಸಿಕೊಡಲಾದ ಅಮಾನತ್ ಸಂರಕ್ಷಿಸುವುದಾದರೆ ಅವರೆಲ್ಲರೂ ಅಹ್ಮದಿಯ್ಯತ್ತಿನ ನೈಜ ರೂಪ ತೋರಿಸಿ ಕೊಡುವರು. ಮತ್ತು ಎಂದೂ ಮುಗ್ಗರಿಸಿ ಬೀಳಲು ಕಾರಣವಾಗಲಾರರು. ಹೀಗೆ ಆದರೆ ಸತ್ಯವಿಶ್ವಾಸ ಎಂಬ ವೃಕ್ಷ ಬಲವತ್ತಾದ ಕಾಂಡವನ್ನು ಹೊಂದಿ ನಿಲ್ಲುವುದು.

ನಾವು ವಿನಯಾನ್ವಿತರಾಗಬೇಕು. ಹಾಗೆ ಮಾಡುವ ಮೂಲಕ ನಾವು ನಮ್ಮ ಆತ್ಮದ ಬಲಿದಾನ ಅರ್ಪಿಸಿದಂತಾಗುವುದು. ನಮ್ಮ ವಿಶ್ವಾಸವನ್ನು ವರ್ಧಿಸುವಂತೆ ಮಾಡಬಹುದು. ನಿರರ್ಥಕ ವಿಷಯಗಳು ನಮ್ಮ ಮನೆಗಳನ್ನು ಸುತ್ತುವರಿದಿವೆ. ಟಿ.ವಿ ಮತ್ತು ಇಂಟರ್‌ನೆಟ್ ರೂಪದಲ್ಲಿ ಅವು ಪ್ರತಿಯೊಂದು ಮನೆಯಲ್ಲಿವೆ. ಅವುಗಳಿಂದ ರಕ್ಷಣೆ ಪಡೆಯುವುದು ನಮ್ಮ ವಿಶ್ವಾಸ ವರ್ಧಿಸಲು ಆವಶ್ಯಕವಾಗಿದೆ. ಹಾಗೆ ಮಾಡಿದರೆ ನಾವು ಹೂ ಮತ್ತು ಹಣ್ಣು ನೀಡುವ ವೃಕ್ಷದ ಶಾಖೆಗಳಾಗಬಲ್ಲೆವು. ಅಲ್ಲಾಹನ ಅನುಗ್ರಹದಿಂದ ನಮ್ಮ ಮತ್ತು ನಮ್ಮ ಸಂತಾನಗಳ ಇಹಲೋಕ ಮತ್ತು ಪರಲೋಕವನ್ನು ಸರಿಪಡಿಸುವವರಾಗುವೆವು.

ಒಂದು ಸಂದರ್ಭದಲ್ಲಿ ಅಹ್ಮದಿಯಾ ಜಮಾಅತಿನ ಪ್ರಕಾಶಮಾನವಾದ ಭವಿಷ್ಯತ್ ಕಾಲದ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಇದು ಆಧ್ಯಾತ್ಮಿಕ ಸಮರದ ಕಾಲವಾಗಿದೆ. ಶೈತಾನನ ವಿರುದ್ಧ ಯುದ್ಧ ಪ್ರಾರಂಭವಾಗಿದೆ. ಶೈತಾನನು ತನ್ನ ಎಲ್ಲ ಆಯುಧಗಳೊಂದಿಗೆ ಮತ್ತು ಕುತಂತ್ರಗಳೊಂದಿಗೆ ಇಸ್ಲಾಮ್ ಧರ್ಮದ ಕೋಟೆಯನ್ನು ಆಕ್ರಮಿಸುತ್ತಿದ್ದಾನೆ. ಅವನು ಇಸ್ಲಾಮನ್ನು ಸೋಲಿಸಲು ಇಚ್ಛಿಸುತ್ತಾನೆ. ಆದರೆ ಶೈತಾನನ ಈ ಕೊನೆಯ ಯುದ್ಧದಲ್ಲಿ ಅವನಿಗೆ ಶಾಶ್ವತ ಸೋಲನ್ನು ನೀಡಲು ಅಲ್ಲಾಹನು ಈ ಜಮಾಅತನ್ನು ಸ್ಥಾಪಿಸಿದ್ದಾನೆ.

ನಾವು ನಮ್ಮ ವಿಶ್ವಾಸವನ್ನು ಬಲಪಡಿಸುವಂತೆ ಅಲ್ಲಾಹನು ಮಾಡಲಿ. ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತಾ ಅವನ ಸಂಪ್ರೀತಿ ಗಳಿಸುವವರನ್ನಾಗಿ ಅಲ್ಲಾಹನು ನಮ್ಮನ್ನು ಮಾಡಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿ ನಾವು ವಹಿಸಿಕೊಂಡ ಹೊಣೆಗಾರಿಕೆಗಳನ್ನು ಈಡೇರಿಸುವವರನ್ನಾಗಿ ಅಲ್ಲಾಹನು ನಮ್ಮನ್ನು ಮಾಡಲಿ. ನಾವು ನಮ್ಮ ಕೃತ್ಯಗಳಿಂದ ಲೋಕಕ್ಕೆ ಸತ್ಯದ ಮಾರ್ಗ ತೋರಿಸಿ ಕೊಡುವವರನ್ನಾಗಿ ಅಲ್ಲಾಹನು ನಮ್ಮನ್ನು ಮಾಡಲಿ. ಅಲ್ಲಾಹನು ನಮಗೆ ದಯಪಾಲಿಸಿದ ಔದಾರ್ಯಗಳಿಗೆ ನಾವು ವಾಸ್ತವಿಕ ರೂಪದಲ್ಲಿ ಕೃತಜ್ಞತೆ ಅರ್ಪಿಸುವವರಾಗೋಣ. ಅಲ್ಲಾಹನು ನಮಗೆ ಆ ಭಾಗ್ಯ ದಯಪಾಲಿಸಲಿ – ಆಮೀನ್.

————————————*****————————————


***Friday Sermon delivered by Hadrath Khaleefatul Masih Al Khamis*** *(atba)*

*at Nusrat Jahan Masjid,Denmark on 06-05-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email:*** *khutuba.kannada@gmail.com*



**You can find all the Sermons archived at**: www.alislam.org/friday-sermon